ರಾಜ್ಯದಲ್ಲಿ ಪಾನನಿರೋಧವನ್ನು ಜಾರಿಗೊಳಿಸುವ ಬಗ್ಗೆ

೭೮೭. ಶ್ರೀ ಕೆ. ಲಕ್ಕಪ್ಪ (ಕುಣಿಗಲ್).—ಮಾನ್ಯ ಆರ್ಥಿಕ ಮತ್ತು ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

ಅ) ಪಾನ ನಿರೋಧದ ಬಗ್ಗೆ ಸರ್ಕಾರದ ನೀತಿ ಏನು ?

ಆ) ಸರ್ಕಾರ ಮಾಡ್ಕದ ವ್ಯಾಪಾರವನ್ನು ಸರ್ಕಾರಿ ಸ್ವಾಮ್ಯದ ಏಜೆಂಟರಿಂದ ಮಾಡುವುದಕ್ಕೆ ಉತ್ತೇಜನ ಕೊಡುತ್ತಿದೆಯೇ ?

ಇ) ಹಾಗಿದ್ದಲ್ಲಿ, ವಿವರಗಳು.

ಎಂ. ರಾಜಶೇಖರ ಮೂರ್ತಿ, (ಆರ್ಥಿಕ ಮತ್ತು ಅಬಕಾರಿ ಸಚಿವರು).—

ಅ) ಇಡೀ ರಾಜ್ಯದಲ್ಲಿ ಸೇಂದಿಯ ವ್ಯಾಪಾರವನ್ನು ಮಾತ್ರ ನಿಷೇದಿಸುವುದು.

ಆ) ಹೌದು

ಇ) ಮದ್ಯ ವ್ಯಾಪಾರವನ್ನು ಎ. ಎಸ್. ಐ. ಎಲ್ ಮೂಲಕ ಮಾಡಲು ಸರ್ಕಾರವು ಈ ಸಂಸ್ಥೆಗೆ ಅಬ್ಕಾರಿ ನಿಯಮಗಳ ಅನುಸಾರ ಪರವಾನಗಿ ನೀಡಿರುತ್ತದೆ.

ಗ್ರಾನೈಟ್ ಗಣಿಗಳನ್ನು ನೀಡುವ ಬಗ್ಗೆ ನಿಯಮಾವಳಿಗಳು.

೭೮೬. ಶ್ರೀ. ಕೆ. ಲಕ್ಕಪ್ಪ (ಕುಣಿಗಲ್).—ಮಾನ್ಯ ಯೋಜನೆ, ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಮತ್ತು ಪ್ರವಾಸೋದ್ಯಮ ಮಂತ್ರಿಗಳು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

ಅ) ಕೆಲವರಿಗೆ ಗ್ರಾನೈಟ್ ಗಣಿಗುತ್ತಿಗೆ ನೀಡಲು ನಿಯಮಗಳನ್ನು ಉಲಂಘನೆ ಮಾಡಿರುವುದು ಸತ್ಯವೇ ?

ಆ) ರಾಜ್ಯದಲ್ಲಿ ಮತ್ತು ಹೊರರಾಜ್ಯಗಳಲ್ಲಿರುವ ಲೈಸೆನ್ಸ್ ಪಡೆದ ಗ್ರಾನೈಟ್ ಗುತ್ತಿಗೆದಾರರ ಹೆಸರುಗಳೇನು ?

ಇ) ಅವರುಗಳಿಂದ ಒಂದಿನ ಮೂರು ವರ್ಷಗಳಲ್ಲಿ ವಸೂಲು ಮಾಡಿರುವ ರಾಜಧನ, ಫೀಸು, ತೆರಿಗೆ ಇತರೆ ಎಷ್ಟು ?

ಎಂ. ವೀರಪ್ಪ ಮೊಯಿಲಿ (ಯೋಜನೆ ಕಾನೂನು ಮತ್ತು ಸಂಸದೀಯ ವ್ಯವಹಾರಗಳು, ಮತ್ತು ಪ್ರವಾಸೋದ್ಯಮ ಮಂತ್ರಿಗಳು).—

ಅ) ಇಲ್ಲ.

ಆ) ಕರ್ನಾಟಕ ಉಪ ಖನಿಜ ರಿಯಾಯಿತಿ ನಿಯಮಾವಳಿಯ ನಿಯಮ ೩—'ಎ' ಯ ತಿದ್ದುಪಡಿಯ ನಂತರ ಯಾವ ವ್ಯಕ್ತಿಗೂ ಗುತ್ತಿಗೆಯನ್ನು ಇಲ್ಲಿಯವರೆವಿಗೆ ನೀಡಿರುವುದಿಲ್ಲ. ಈ ತಿದ್ದುಪಡಿಗೆ ಮೊದಲು ಮೆ. ಮೈಸೂರು ಮಿನರಲ್ಸ್ ಲಿಮಿಟೆಡ್‌ನ ಹೊರತುಪಡಿಸಿ ಯಾವುದೇ ಖಾಸಗೀ ವ್ಯಕ್ತಿಯು ಕ್ರಮಬದ್ಧವಾದ ಗುತ್ತಿಗೆಯನ್ನು ಗ್ರಾನೈಟ್ ಹೊರತೆಗೆಯಲು ಹೊಂದಿರಲಿಲ್ಲ.

ಇ) ವಸೂಲು ಮಾಡಿರುವ ರಾಜಧನ, ಫೀಸು ಮತ್ತು ತೆರಿಗೆ ಕೆಳಕಂಡಂತಿದೆ.

ವರ್ಷ	೧೯೮೭	೧೯೮೮	೧೯೮೯
ರಾಜಧನ	೨೫.೦೩ (ಲಕ್ಷಗಳು)	೫೫.೯೪ (ಲಕ್ಷಗಳು)	೫೪.೪೯ (ಲಕ್ಷಗಳು)
ಅರ್ಜಿಫೀಸು ಮಿನರಲ್	೧೧.೦೦೦	೧೮.೫೦೦	೨೫.೨೫೦
ರೈಟ್‌ತೆರಿಗೆ	೬,೬೯,೬೯೦	೧ ೮೩,೦೩೧	—